ದಿನಾಂಕಃ 23-07-2016

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದಃ

ದಾವೆದ ಎಲ್ಲ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಂತಾ ಅನ್ನುವುದು ನಿಜ. ನಮ್ಮ ತಂದೆಯ ಹಿಸ್ಸೆಯಲ್ಲಿ ಒಟ್ಟು ಎಷ್ಟು ಆಸ್ತಿಗಳು ಇದ್ದವು ಅಂತಾ ನನಗೆ ಹೇಳಲು ಬರುವದಿಲ್ಲ. ವಿಪಿಸಿನಂ ಃ 182 ಇದು ಮನೆ ಮತ್ತು ಖುಲ್ಲಾ ಜಾಗೆ ಒಳಗೊಂಡಿರುತ್ತದೆ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಆಸ್ತಿ ಈಗ ನನ್ನ ಕಬ್ಜೆಯಲ್ಲಿರುತ್ತದೆ. ಸದರಿ ಆಸ್ತಿಯಲ್ಲಿನ ನನ್ನ ಹಿಸ್ಸೆ ಒಬ್ಬ ಶಿವಾಜಿ ಲೋಹಾರ ಎಂಬವರಿನಿಗೆ ನಾನು ಮಾರಾಟ ಮಾಡಿದ್ದೇನೆ ಅಂತಾ ಅಂದರೆ ನಾನು ಮತ್ತು 3 ನೇ ಪ್ರತಿವಾದಿ ಸೇರಿ ಮಾರಾಟ ಮಾಡಿದ್ದೆವೆ. ಸದರಿ ಖರೀದಿ ಪತ್ರ ನಮ್ಮ ತಂದೆ ಬರೆದು ಕೊಟ್ಟಿರುತ್ತಾನೆ. ವಿಪಿಸಿನಂ ಃ 182 ಮನೆಗೆ ಈಗ ನನ್ನ ಹೆಸರು ದಾಖಲೆಯಲ್ಲಿ ಇರುತ್ತದೆ. ರಃ ದಾವಾ ದಾಖಲು ಮಾಡುವ ಕಾಲಕ್ಕೆ ಸದರಿ ಆಸ್ತಿ ಮಾರಾಟ ಮಾಡಿದ ವಿಷಯ ತಿಳಿಸಿದ್ದರು ಹೇಗೆ ಅಂತಾ ನನಗೆ ಮಾಹಿತಿ ಇರುವದಿಲ್ಲ. ಸದರಿ ಆಸ್ತಿಯಲ್ಲಿ 2 ಭಾಗಗಳಾನ್ನಾಗಿ ಮಾಡಲಾಗಿದೆ ಅಂತಾ ಅನ್ನುವುದು ನಿಜ. ಪೂರ್ವದ ಅರ್ಧ ಭಾಗದಲ್ಲಿ 1 ನೇ ಪ್ರತಿವಾದಿಯ ತಂದೆ ವಾಸ ವಾಗಿದ್ದನು ಅಂತಾ ಅನ್ನುವುದು ನಿಜ. ಈಗ ಸದರಿ ಪೂರ್ವದ ಅರ್ಧ ಭಾಗದಲ್ಲಿ ಒಬ್ಬ ಶಿವಾಜಿ ಪಾಂಡುರಂಗ ಲೋಹಾರ ಇತನು ವಾಸವಾಗಿದ್ದಾನೆ. ಆತನು ಕಳೆದ 20 – 25 ವರ್ಷಗಳಿಂದ ಸದರಿ ಪೂರ್ವದ ಭಾಗದ ಮನೆಯಲ್ಲಿ ವಾಸವಾಗಿದ್ದಾನೆ. ಪಶ್ಚಿಮ ಭಾಗದ ಅರ್ಧ ಮನೆಯಲ್ಲಿ ನಾನು , ನನ್ನ ತಂದೆ ವಾಸವಾಗಿದ್ದೇವೆ ಅಂತಾ ಅನ್ನುವುದು ನಿಜ. ವಿಪಿಸಿನಂ ಃ 182 ರ ಪಶ್ಚಿಮದ ಅರ್ಧ ಭಾಗವನ್ನು 2004 ರಲ್ಲಿ ಮಾರಾಟ ಮಾಡಿದ್ದೇನೆ ಅಂತಾ ಅನ್ನುವುದು ಸುಳ್ಳು. 1 ನೇ ಪ್ರತಿವಾದಿ ಯ ತಂದೆ ತನ್ನ ಪೂರ್ವದ ಅರ್ಧ ಹಿಸ್ಸೆಯನ್ನು ಭರ್ಮ ಮತ್ತು ಪರಶುರಾಮ ಎಂಬವರಿಗೆ ಮಾರಾಟ ಮಾಡಿದ್ದಾರೆ ಅಂತಾ ಅನ್ನುವುದು ನಿಜ. ಈ ವಿಷಯ ವಾದ ಪತ್ರದಲ್ಲಿ ಕಾಣಿಸಿಲ್ಲ ಅಂತಾ ಅನ್ನುವುದು ನಿಜ. ಸರ್ವೆ ನಂಃ 18/7 ರಲ್ಲಿ ನಾನು ಮತ್ತು 1 ನೇ ಪ್ರತಿವಾದಿ ಸಾಮೂಹಿಕ ಕಬ್ಜೆಯಲ್ಲಿ ಇದ್ದೇವೆ. ಅದರಲ್ಲಿ ನಾನು ಕಬ್ಬು , ಭತ್ತ ಮತ್ತು ಶೆಂಗಾ ಬೆಳೆಯುತ್ತಿದ್ದೇನೆ. ಈ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂತಾ ಅನ್ನುವುದು ಸುಳ್ಳು. ಸದರಿ ಜಮೀನುವನ್ನು ನಾನು ಮತ್ತು 2 ನೇ ವಾದಿ ಇಬ್ಬರು ಸೇರಿ ದಿಃ 18 – 06 – 1997 ರಂದು ಹರಾಡೆ ಎಂಬವರಿಗೆ ಮಾರಾಟ ಮಾಡಿದ್ದೇವೆ ಅಂತಾ ಅಂದರೆ ನಾವು ಮತ್ತು 1 ನೇ ಪ್ರತಿವಾದಿಯ ತಂದೆ ಕೂಡಿ ಮಾಡಿದ್ದೆವೆ. ಸದರಿ ಖರೀದಿ ಪತ್ರದ ಮೇಲೆ 1 ನೇ ಪ್ರತಿವಾದಿ ತಂದೆಯ ಸಹಿ ಇರುತ್ತದೆ. ಖರೀದಿ ಲಾಗಾಯಿತ ಸದರಿ ಜಮೀನು ಹರಾಡೆ ಇತನ ಕಬ್ಜಾ ವಹಿವಾಟಿಯಲ್ಲಿ ಇದೆ ಅಂತಾ ಅನ್ನುವುದು ನಿಜ. 1 ನೇ ಪ್ರತಿವಾದಿ ತಂದೆ ಅಸಲು ದಾವಾ ನಂ ಃ 105/1998 ಎಂಬ ದಾವೆ ಸಂಕೇಶ್ವರ ನ್ಯಾಯಾಲಯದಲ್ಲಿ ಹೂಡಿದ್ದನು ಅಂತಾ ಅನ್ನುವುದು ನಿಜ. ಅದರಲ್ಲಿ ನಾನು ಪ್ರತಿವಾದಿಯಾಗಿದ್ದು ಕೈಫಿಯತ ಸಲ್ಲಿಸಿದ್ದೇನು ಅಂತಾ

ಅನ್ನುವುದು ನಿಜ.  ಸದರಿ ದಾವೆ ರಾಜಿ  ಡಿಕ್ರಿ ಯಾಯಿತು ಅಂತಾ ಅನ್ನುವುದು ನಿಜ.  ಸದರಿ ದಾವೆಯಲ್ಲಿ ಸರ್ವೆ 18/7  ಒಂದೇ ದಾವಾ ಆಸ್ತಿಯಾಗಿತ್ತು.   ಉಳಿದ ಆಸ್ತಿಗಳಲ್ಲಿ  ವಾಟ್ನಿ ಆಗಿತ್ತು ಹೇಗೆ ಅಂತಾ ಆ ದಾವೆ ಯಲ್ಲಿ ಬರೆ ದಿದ್ದರು ಅಂತಾ ಕೇಳಿದ ಪ್ರಶ್ನೆಗೆ ಅದನ್ನು 1 ನೇ ಪ್ರತಿವಾದಿ ತಂದೆ ಮಾಡಿದ್ದನು ಅಂತಾ ಸಾಕ್ಷಿ ಉತ್ತರಿಸುತ್ತಾನೆ. ವಾದ ಪತ್ರದಲ್ಲಿ  ಮೇಲ್ಕಂಡ ದಾವೆದ ಎನೂ ತಿಳಿಸಿಲ್ಲ ಅಂತಾ ಅನ್ನುವುದು ನಿಜ. ಸರ್ವೆ ನಂ ಃ 156/7 ಮೊದಲಿಗೆ ಒಬ್ಬ ದಡ್ಡಿಕರ ಎಂಬವರ ಮಾಲ್ಕಿ ಆಸ್ತಿ ಇತ್ತು. ಆತನ ಹೆಸರು ನನಗೆ ಗೊತ್ತಿರುವದಿಲ್ಲ.  ಸದರಿ ಜಮೀನು ಈ ದಾವೆಯಲ್ಲಿ ಇರುತ್ತದೆ.  ನಮ್ಮ ತಂದೆ ಮತ್ತು 1 ನೇ ಪರತಿವಾದಿಯ ತಂದೆ ಸದರಿ ಜಮೀನುವನ್ನು ದಡ್ಡಿಕರ ಕಡೆಯಿಂದ ಖರೀ ದಿಸಿರುತ್ತಾರೆ. ಆ ಖರೀದಿ ಪತ್ರ ನಾನು ನೋಡಿರುವದಿಲ್ಲ.  ಸದರಿ ಜಮೀನಿಗೆ ಈಗ 1 ನೇ ಪ್ರತಿವಾದಿಯ ಹೆಸರು ದಾಖಲೆಯಲ್ಲಿ ಇದೆ. ಆತನ ಹೆಸರು ಆತನ ತಂದೆ ತೀರಿಕೊಂಡ ನಂತರ ದಾಖಲಾಗಿರುತ್ತದೆ. 1 ನೇ ಪ್ರತಿವಾದಿಯ ತಂದೆ ಹೆಸರು ಸದರಿ ಜಮೀನಿಗೆ ಎಷ್ಟು ವರ್ಷಗಳಿಂದ ದಾಖಲೆಯಲ್ಲಿ ಇತ್ತು ಎಂಬುವದು ನನಗೆ ಗೊತ್ತಿರುವದಿಲ್ಲ. 1 ನೇ ಪ್ರತಿವಾದಿ ತಂದೆ ತೀರಿಕೊಂಡು 5 – 6 ವರ್ಷಗಳು ಆಗಿರುತ್ತವೆ. ನಮ್ಮ ತಂದೆ ಅಂದಾಜು 20 – 21 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ.  ನಮ್ಮ ತಂದೆ ತೀರಿಕೊಂಡ ನಂತರ ಆತನ ಆಸ್ತಿಗಳಿಗೆ ವಾರಸಾ ನಾತೆಯಿಂದ ನಮ್ಮ ಹೆಸರನ್ನು ಹಚ್ಚಿಸಿಕೊಂಡಿದ್ದೇವೆ. 1 ನೇ ಪ್ರತಿವಾದಿ ಹೆಸರು ದಾಖಲಿಸುವ ಸಮಯದಲ್ಲಿ ನಾನು ತಕರಾರು ಮಾಡಿದ್ದೇನು. ಆರ್‌ಟಿಎಸ್ ಪ್ರಕರಣದಲ್ಲಿ 1 ನೇ ಪ್ರತಿವಾದಿ ಹೆಸರು ದಾಖಲಿಸಲು ಆದೇಶವಾಗಿರುತ್ತದೆ. ಸರ್ವೆ ನಂಃ 161 , 162 ಮೊದಲಿಗೆ ಯಾರ ಮಾಲ್ಕಿ ಆಸ್ತಿಗಳು ಎಂಬುದು ನನಗೆ ಗೊತ್ತಿರುವದಿಲ್ಲ. ಸದರಿ ಜಮೀನಿಗೆ ನನ್ನ ತಂದೆ ಹೆಸರು ಎಂದೂ ದಾಖಲಾಗಿರಲಿಲ್ಲ ಅಂತಾ ಅನ್ನುವುದು ನಿಜ ಎಕೆಂದರೆ ನಮ್ಮ ತಂದೆ ಅಶಿಕ್ಷಿತನು ಆಗಿದ್ದನು  ಅದಕ್ಕಾಗಿ 1 ನೇ ಪ್ರತಿವಾದಿಯ ತಂದೆಯ ಹೆಸರು ಕರ್ತಾನಾತೆಯಿಂದ ದಾಖಲಾಯಿತು.

ಮುಂದುವರೆದ ಪಾಟೀ ಸವಾಲು ವಕೀಲರ ವಿನಂತಿ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ